6. ದಿ: 13–3–06ರಂದು ಡಾ: ಯು.ವಿ.ಎಸ್. ರಾಣ, ಉಪನಿರ್ದೇಶಕರು, ಎನ್.ಐ.ಸಿ.ಡಿ. ದೆಹಲಿ ಇವರು ಬೀದರ್ ಜಿಲ್ಲೆಗೆ ಭೇಟಿ ನೀಡಿ ಮಾರ್ಗದರ್ಶನವನ್ನು ನೀಡಿರುತ್ತಾರೆ.

7. ದಿ: 21–9–05/ 30–3–06 ರಂದು ಬೀದರ್ ರಕ್ಷಾಳ (ಬಿ) ಡೋಣಗಾಂವ ಗ್ರಾಮಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಕೀಟಾಧ್ಯಯನ ನಡೆಸಲಾಗಿದೆ.

8. ಸಂಶಯಾಸ್ಪದ ಹಳ್ಳಿಗಳಿಗೆ ಭೇಟಿ ನೀಡಲು ವಿಶೇಷ ತಂಡಗಳನ್ನು ರಚಿಸಿ, ಮಾಹಿತಿ, ಶಿಕ್ಷಣ ಸಂಪರ್ಕ ಆಂಧೋಲನ ನಡೆಸಲಾಗಿದೆ ಹಾಗೂ ಬೀದರ್ ನಗರದಲ್ಲಿ ಸ್ವಯಂ ಸೇವಾ ಸಂಘಗಳ ಸಹಕಾರದಿಂದ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತಿಯೊಂದು ಮನೆಗಳಿಗೆ ಚಿಕುಂಗುನ್ಯ ರೋಗದ ಬಗ್ಗೆ ಮಾಹಿತಿ ಒದಗಿಸಲಾಯಿತು.

9. ಎಲ್ಲಾ ಜಿಲ್ಲಾ ಮಟ್ಟದ ಆರೋಗ್ಯ ಅನುಷ್ಟಾನಾಧಿಕಾರಿಗಳ ವಿಶೇಷ ಸಂಚಾರಿ ತಂಡಗಳನ್ನು ರಚಿಸಿ, ಎಲ್ಲಾ ರೋಗಗ್ರಸ್ಥ ಹಳ್ಳಿಗಳಿಗೆ ಭೇಟಿ ನೀಡಿರುತ್ತಾರೆ.

10. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಸುಮಾರು 350 ಹಳ್ಳಿಗಳಿಗೆ ಭೇಟಿ ನೀಡಿ ಮುಂಜಾಗ್ರತಾ ಕ್ರಮ ತೆಗೆದುಕೊಂಡಿರುತ್ತಾರೆ.

11. ಈ ಎಲ್ಲಾ ಮೇಲ್ಕಂಡ ಕ್ರಮಗಳನ್ನು ಕೈಗೊಳ್ಳುವ ಮೂಲಕ ಜಿಲ್ಲಾ ಆಡಳಿತವು ರೋಗದ ಮೇಲೆ ತೀವ್ರ ನಿಗಾವಹಿಸುತ್ತಿದೆ.

556 (911) ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು, ಶುಶ್ರೂಷಕರು ಹಾಗೂ ವೈದ್ಯಕೇತರ ಹುದ್ದೆಗಳ ಸಂಖ್ಯೆಗಳೆಷ್ಟು; (ಆಸ್ಪತ್ರೆವಾರು ಖಾಲಿ ಹುದ್ದೆವಾರು ವಿವರ ನೀಡುವುದು);

ಆ) ವೈದ್ಯರು ಹಾಗೂ ವೈದ್ಯಕೇತರ ಸಿಬ್ಬಂದಿಯ ಕೊರತೆಯಿಂದಾಗಿ ಸಾರ್ವಜನಿಕರಿಗೆ ಸರಿಯಾದ ವೈದ್ಯಕೀಯ ಸೌಲಭ್ಯ ಸಿಗದೆ ರೋಗಿಗಳು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಸದರಿ ಹುದ್ದೆಗಳನ್ನು ಕೂಡಲೇ ತುಂಬಲಾಗುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ:

ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	21	13	8
ಶುಶ್ರೂಷಕರು	11	7	4
ವೈದ್ಯೇತರರು	165	97	68

(ಆಸ್ಪತ್ರೆವಾರು ಖಾಲಿ ಹುದ್ದೆಗಳ ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ).

ಆ) ಮೇಲಿನಂತೆ ಮತ್ತು ವೈದ್ಯೇತರ ಸಿಬ್ಬಂದಿ ಕೊರತೆ ಇದ್ದರೂ ಸಹ ಹಾಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಮತ್ತು ವೈದ್ಯೇತರ ಸಿಬ್ಬಂದಿಗಳು ಆಸ್ಪತ್ರೆಗೆ ಬರುವ ರೋಗಿಗಳಿಗೆ ಅಗತ್ಯ ಚಿಕಿತ್ಸಾ ಸೇವೆಯನ್ನು ನೀಡುತ್ತಿದ್ದಾರೆ.

ಇ) 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಕರಡು ಅಧಿಸೂಚನೆ ಹೊರಡಿಸಿದೆ. ಮೊದಲನೇ ಹಂತದಲ್ಲಿ 250 ವೈದ್ಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿ ನೇರ ನೇಮಕಾತಿಯನ್ನು ಶೀಘ್ರ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ವೈದ್ಯೇತರ ಹುದ್ದೆಗಳಲ್ಲಿ ಶುಶ್ರೂಷಕ ಹುದ್ದೆಗಳು 400. ಕಿರಿಯ ಆರೋಗ್ಯ ಸಹಾಯಕ (ಪುರುಷ) 329 ಕಿರಿಯ ಪ್ರಯೋಗಶಾಲಾ ತಂತ್ರಜ್ಞ 532, ಕ್ಷ–ಕಿರಣ ತಂತ್ರಜ್ಞರು 56, ಫಾರ್ಮಸಿಸ್ಟ್ 400, ನೇತ್ರ ಸಹಾಯಕರು 90, ಕಿರಿಯ ಆರೋಗ್ಯ ಸಹಾಯಕರು (ಮಹಿಳೆ) 1000, ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 862 ಹೆಚ್ಎಸ್ಹೆಚ್ 2004, ದಿನಾಂಕ: 15–5–05 ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯ ನಂತರ ನೇಮಕಾತಿ ಬಗ್ಗೆ ಪ್ರಕ್ರಿಯೆ ಕೈಗೊಳ್ಳಲಾಗುವುದು. ಬಡ್ತಿ ಮೂಲಕ ತುಂಬಬಹುದಾದ ಹುದ್ದೆಗಳನ್ನು ತುಂಬಲು ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಈ) ನೇರ ನೇಮಕಾತಿ ಪ್ರಕ್ರಿಯೆಯನ್ನು ಅನುಸರಿಸಿ ಖಾಲಿ ಹುದ್ದೆಗಳನ್ನು ತುಂಬಲು ಶೀಘ್ರ ಕ್ರಮ ಜರುಗಿಸಲಾಗುವುದು.

ಪ್ರಶ್ನೆ ಸಂಖ್ಯೆ 911ಕ್ಕೆ ಅನುಬಂಧ–1

ಹೊಸ ನಗರ ತಾಲ್ಲೂಕು

ಕ್ರ.ಸಂ.	ಸಂಸ್ಥೆಯ ಹೆಸರು	ಹುದ್ದೆಗಳ ಹೆಸರು	ಮಂಜೂರು	ಭರ್ತಿ	ಖಾಲಿ	ಷರಾ
1.	ತಾ: ಆರೋಗ್ಯಾಧಿಕಾರಿ, ಹೊ.ನಗರ	ವೈದ್ಯಾಧಿಕಾರಿ	1	–	1	
		ಹಿ.ಮ.ಅ.ಸ.	1	0	1	
		ಹಿ ಮ ಅ ಸ	1	1	0	
		ಪ್ರ ದ ಸ	1	1	0	
		ದ್ವಿ ದ ಸ	1	1	0	

ಕ್ರ.ಸಂ.	ಸಂಸ್ಥೆಯ ಹೆಸರು	ಹುದ್ದೆಗಳ ಹೆಸರು	ಮಂಜೂರು	ಭರ್ತಿ	ಖಾಲಿ	ಷರಾ
		ವಾ. ಚಾಲಕ	1	1	0	
		ಗ್ರೂಪ್ ಡಿ	1	1	0	
2.	ಸಾ. ಆಸ್ಪತ್ರೆ	ಫಿಟಿಷಿಯನ್	1	1	0	ಗುತ್ತಿಗೆ
	ಹೊಸನಗರ	ಶಸ್ತ್ರ ಚಿಕಿತ್ಸಕರು	1	0	1	
		ಪ್ರಸೂತಿ ತಜ್ಞರು	1	1	0	ಗುತ್ತಿಗೆ
		ಹಿರಿಯ ವೈದ್ಯರು	1	1	0	
		ಮಕ್ಕಳ ತಜ್ಞರು	1	1	0	ಗುತ್ತಿಗೆ
		ಅರವಳಿಕೆ ತಜ್ಞರು	1	0	1	
		ದಂತ ವೈದ್ಯರು	1	0	1	
		ನೇತ್ರ ವೈದ್ಯರು	1	0	1	
	ಸಾ.ಆ. ಹೊಸನಗರ		**8**	**4**	**4**	
3.	ಸಾ. ಆಸ್ಪತ್ರೆ,	ಕಛೇರಿ ಅಧೀಕ್ಷಕರು	1	0	1	
	ಹೊಸನಗರ	ಹಿ ಪು ಅ ಸ	1	1	0	
		ಕಿ ಪು ಅ ಸ	6	2	4	
		ಕಿ ಮ ಅ ಸ	11	10	1	
		ಹಿ ಪ್ರ ಶಾ ತಂ	1	0	1	
		ಸ ಕಂ ಟೈಪಿಸ್ಟ್	1	1	0	
		ಪ್ರ ದ ಸ	1	1	0	
		ಕಿ ಫಾರ್ಮಾಸಿಸ್ಟ್	1	1	0	
		ಶುಶ್ರೂಷಕರು	7	3	4	
		ಹಿ ಫಾರ್ಮಾಸಿಸ್ಟ್	1	0	1	
		ಕಿ ಪ್ರ ಶಾ ತಂ	1	1	0	
		ಕ್ಷೇ ಆ ಶಿಕ್ಷಣಾಧಿಕಾರಿ	1	0	1	
		ಕ್ಷ ಕಿ ತಂತ್ರಜ್ಞ	1	1	0	
		ನೇತ್ರ ಸಹಾಯಕರು	1	1	0	
		ವಾಹನ ಚಾಲಕರು	3	2	1	
	ಸಾರ್ವಜನಿಕ ಆಸ್ಪತ್ರೆ,	ಗ್ರೂಪ್ ಡಿ	20	4	16	
	ಹೊಸನಗರ					

ಕ್ರ.ಸಂ.	ಸಂಸ್ಥೆಯ ಹೆಸರು	ಹುದ್ದೆಗಳ ಹೆಸರು	ಮಂಜೂರು	ಭರ್ತಿ	ಖಾಲಿ	ಷರಾ
3ಎ.	ಸಂಯುಕ್ತ ಆಸ್ಪತ್ರೆ,	ವೈದ್ಯಾಧಿಕಾರಿ	2	1	1	
	ನಗರ	ಕಿ ಪು ಆ ಸ	1	0	1	
		ಕಿ ಫಾರ್ಮಾಸಿಸ್ಟ್	1	1	0	
		ಗ್ರೂಪ್ ಡಿ	7	2	5	
4.	ಪ್ರಾ ಆ ಕೇಂದ್ರ,	ವೈದ್ಯಾಧಿಕಾರಿ	1	1	0	
	ಯರೂರು	ಕಿಪುಆಸ	2	0	2	
		ಕಿ ಪು ಆ ಸ	1	0	1	
		ಕಿ ಮ ಆ ಸ	3	3	0	
		ಪ್ರ ದ ಸ	1	0	1	
		ಕಿ ಫಾರ್ಮಾಸಿಸ್ಟ್	1	1	0	
		ಶುಶ್ರೂಷಕರು	1	1	0	
		ಕಿ ಪ್ರ ಶಾ ತಂ	1	1	0	
		ಗ್ರೂಪ್ ಡಿ	3	1	2	
5.	ಪ್ರಾ ಆ ಕೇಂದ್ರ,	ವೈದ್ಯಾಧಿಕಾರಿ	2	2	0	ಗುತ್ತಿಗೆ
	ರಿಪ್ಪನ್‌ಪೇಟೆ	ಹಿ ಪು ಆ ಸ	1	0	1	
		ಹಿ ಪು ಆ ಸ	1	1	0	
		ಕಿ ಪು ಆ ಸ	6	2	4	
		ಕಿ ಮ ಆ ಸ	7	7	0	
		ದ್ವಿ ದ ಸ	2	1	1	
		ಕಿ ಫಾರ್ಮಾಸಿಸ್ಟ್	1	1	0	
		ಶುಶ್ರೂಷಕರು	2	2	0	
		ಕಿ ಪ್ರ ಶಾ ತಂ	1	1	0	
		ನೇತ್ರ ಸ. ಕರು	1	1	0	
		ಸ. ಕರು	1	1	0	
		ಗ್ರೂಪ್ ಡಿ	4	4	0	
6.	ಪ್ರಾ ಆ ಕೇಂದ್ರ,	ವೈದ್ಯಾಧಿಕಾರಿ	1	0	1	
		ಹಿ ಪು ಆ ಸ	1	1	0	

ಕ್ರ.ಸಂ.	ಸಂಸ್ಥೆಯ ಹೆಸರು	ಹುದ್ದೆಗಳ ಹೆಸರು	ಮಂಜೂರು	ಭರ್ತಿ	ಖಾಲಿ	ಷರಾ
		ಕಿ ಪು ಆ ಸ	2	1	1	
		ಕಿ ಪು ಆ ಸ	2	2	0	
		ಕಿ ಫಾರ್ಮಾಸಿಸ್ಟ್	1	1	0	
		ಕಿ ಪ್ರ ಶಾ ತಂ	1	1	0	
		ಗ್ರೂಪ್ ಡಿ	2	1	1	
7.	ಪ್ರಾ ಆ ಕೇಂದ್ರ,	ವೈದ್ಯಾಧಿಕಾರಿ	1	1	0	ಗುತ್ತಿಗೆ
	ಹರಿದ್ರಾವತಿ	ಹಿ ಮ ಆ ಸ	1	0	1	
		ಕಿ ಪು ಆ ಸ	1	1	0	
		ಕಿ ಪು ಆ ಸ	3	1	2	
		ಕಿ ಮ ಆ ಸ	5	4	1	
		ಕಿ ಫಾರ್ಮಾಸಿಸ್ಟ್	1	1	0	
		ಶುಶ್ರೂಷಕರು	1	1	0	
		ಕಿ ಪ್ರ ಶಾ ತಂ	1	1	0	
		ಕ್ಷೇ ಆ ಶಿ	1	0	1	
8.	ಪ್ರಾ ಆ ಕೇಂದ್ರ,	ವೈದ್ಯಾಧಿಕಾರಿ	1	1	0	ಗುತ್ತಿಗೆ
	ಮಾರುತಿಪುರ	ಕಿ ಮ ಆ ಸ	1	0	1	
		ಪ್ರದಸ	1	0	1	
		ಕಿ ಫಾರ್ಮಾಸಿಸ್ಟ್	1	1	0	
		ಕಿ ಪ್ರ ಶಾ ತಂ	1	0	1	
		ಗ್ರೂಪ್ ಡಿ	1	1	0	
9.	ಪ್ರಾ ಆ ಘಟಕ,	ವೈದ್ಯಾಧಿಕಾರಿ	1	0	1	
	ನಿಟ್ಟೂರು	ಕಿಪುಆಸ	2	0	2	
		ಕಿಪುಆಸ	3	2	1	
		ಕಿ ಫಾರ್ಮಾಸಿಸ್ಟ್	1	1	0	
		ಗ್ರೂಪ್ ಡಿ	2	1	1	
10.	ಪ್ರಾ ಆ ಘಟಕ,	ವೈದ್ಯಾಧಿಕಾರಿ	1	1	0	ಗುತ್ತಿಗೆ
	ಕೋಡೂರು	ಕಿಪುಆಸ	2	1	1	

ಕ್ರ.ಸಂ.	ಸಂಸ್ಥೆಯ ಹೆಸರು	ಹುದ್ದೆಗಳ ಹೆಸರು	ಮಂಜೂರು	ಭರ್ತಿ	ಖಾಲಿ	ಷರಾ
		ಕಿಮಆಸ	3	0	3	
		ಕಿ ಫಾರ್ಮಾಸಿಸ್ಟ್	1	1	0	
		ಗ್ರೂಪ್ ಡಿ	2	2	0	
11.	ಪ್ರಾ ಆ ಘಟಕ,	ವೈದ್ಯಾಧಿಕಾರಿ	1	1	0	ಗುತ್ತಿಗೆ
	ಸೋನ್ಲ್	ಕಿಮಆಸ	2	0	2	
		ಕಿಮಆಸ	2	2	0	
		ಕಿ ಫಾರ್ಮಾಸಿಸ್ಟ್	1	1	0	
		ಗ್ರೂಪ್ ಡಿ	2	2	0	
12.	ಪ್ರಾ ಆ ಘಟಕ,	ವೈದ್ಯಾಧಿಕಾರಿ	1	1	0	
	ಸಂಪೇಕಟ್ಟೆ	ಕಿಮಆಸ	1	0	1	
		ಕಿಮಆಸ	1	1	0	
		ಕಿ ಫಾರ್ಮಾಸಿಸ್ಟ್	1	1	0	
		ಗ್ರೂಪ್ ಡಿ	2	2	0	

557 (797) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕಿನ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ;

ಆ) ಹಾಗಿದ್ದಲ್ಲಿ, ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ (ಕ್ಷೇತ್ರವಾರು ವಿವರ ನೀಡುವುದು;)

ಇ) ಬಾಕಿ ಇರುವ ಪ್ರಕರಣಗಳೆಷ್ಟು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಯಾವುದು ಇಲ್ಲ.

ಆ) ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಜನ ಸಂಖ್ಯೆಯ ಆಧಾರದ ಮೇಲೆ ಹಾಗೂ ಅವಶ್ಯಕತೆಗನುಗುಣವಾಗಿ ಪರಿಗಣಿಸಲಾಗುವುದು.

ಇ) ಇಲ್ಲ.